# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದೀಪಾಂಜಲಿನಗರ, ವಾರ್ಡ್ ಸಂಖ್ಯೆ–158, ಪಾಲಿಕೆ ಸದಸ್ಯರ ಕಛೇರಿ, 8ನೇ ಮುಖ್ಯರಸ್ತೆ, ಆವಲಹಳ್ಳಿ ಬಿಡಿಎ ಬಡಾವಣೆ, (ಅಭಯ ಆಂಜನೇಯ ದೇವಸ್ಥಾನ ಹತ್ತಿರ)ಬೆಂಗಳೂರು–560 026

---

ಸಂಖ್ಯೆ: ಸ.ಕಾ.ನಿ.ಅ/ಗಾಳಿ/ಪಿಆರ್/ /22–23 ದಿನಾಂಕ:–24–04–2022

ವಾರ್ಡ್ ಸಂಖ್ಯೆ : 158 ವಾರ್ಡ್ ಸಭೆಯ ನಡವಳಿ

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ/ಅಧ್ಯಕ್ಷರು | ಹಾಜರಾತಿ |
|---|---|---|---|
| 1 | ಶ್ರೀಮತಿ. ಚೈತ್ರ .ಜಿ.ಎಸ್. | ಕಾರ್ಯದರ್ಶಿ | ಹಾಜರಾಗಿರುತ್ತಾರೆ |
| 2 | ಶ್ರೀ. ಮಂಜುನಾಥ .ಎನ್. | ಜಲ ಪರಿವೀಕ್ಷಕರು ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಹಾಜರಾಗಿರುತ್ತಾರೆ |
| 3 | ಶ್ರೀ. ಹೆಚ್. ಮಂಜುನಾಥ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 4 | ಶ್ರೀ. ಅಭಿಲಾಶ್ .ಎನ್. | ಕಂದಾಯ ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 5 | ಶ್ರೀ. ಹೆಚ್.ಕೆ. ಕೃಷ್ಣಪ್ಪ | ಬಿ.ಡಬ್ಲ್ಯೂ.ಎಸ್.ಎಸ್.ಬಿ.. | ಹಾಜರಾಗಿರುತ್ತಾರೆ |
| 6 | ಶ್ರೀ. ಮೋಹನ್ | ಬೀದಿ ದೀಪ ವಿಭಾಗ | ಹಾಜರಾಗಿರುತ್ತಾರೆ |

**ಸಭೆಗೆ ಹಾಜರಿದ್ದ ಸಾರ್ವಜನಿಕರು**

1. ಶ್ರೀ. ಎಂ. ವೆಂಕಟೇಶ್
2. ಶ್ರೀ. ರಾಜು
3. ಶ್ರೀಮತಿ. ಗಿರಿಜಮ್ಮ
4. ಶ್ರೀಮತಿ. ರಾಜೇಶ್ವರಿ
5. ಡಾ|| ಎನ್. ಗೋಪಾಲಕೃಷ್ಣ
6. ಶ್ರೀ. ಮೂರ್ತಿ

ಸಮಿತಿಯ ಕಾರ್ಯದರ್ಶಿಯವರು ಹಾಜರಿದ್ದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಮತ್ತು ಸದಸ್ಯರುಗಳಿಗೆ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತ ಕೋರಿದ ನಂತರ ಸಭೆಯನ್ನು ಆರಂಭಿಸಲಾಯಿತು.

ಈ ಹಿಂದಿನ ಸಭೆಯಲ್ಲಿ ಬಂದಿದ್ದ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುತ್ತ ಪ್ರಸ್ತುತ ಕುಂದು ಕೊರತೆಗಳ ಬಗ್ಗೆ ಚರ್ಚೆ ಪ್ರಾರಂಭಿಸಲಾಯಿತು.

ಆರೋಗ್ಯ ಅಧಿಕಾರಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಆಸ್ಪತ್ರೆಯನ್ನು ವಾರ್ಡ್ ಕಛೇರಿಯ ಹತ್ತಿರ ಶಿಫ್ಟ್ ಮಾಡುವ ಬಗ್ಗೆ ಸದರಿ ಜಾಗವನ್ನು ಆರೋಗ್ಯ ವೈದ್ಯಾಧಿಕಾರಿಗಳು ತಪಾಸಣೆ ಮಾಡಿಕೊಂಡು ಹೋಗಿರುತ್ತಾರೆ. ಶ್ರೀಮತಿ. ಲೇಟ್ ಪೂಜಮ್ಮ ರವರಿಗೆ ಮರಣ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲವೆಂದು ಹಾಗೂ ಕೊರೋನದ ಬಗ್ಗೆ ಕಾಲೋನಿಯಲ್ಲಿ ಪ್ರಚಾರ ಮಾಡಿ ಫಾಗಿಂಗ್ ಮಾಡುವಂತೆ ಸಭೆಯಲ್ಲಿ ಹಾಜರಿದ್ದ ಶ್ರೀ. ಎಂ. ವೆಂಕಟೇಶ್ ರವರು ತಿಳಿಸಿದರು.

**ಕ್ರಮ : ಆರೋಗ್ಯ ಇಲಾಖೆ**

ಕಸ್ತೂರಿಬಾ ಕಾಲೋನಿ, 22ನೇ ಅಡ್ಡರಸ್ತೆಯಲ್ಲಿ ಮ್ಯಾನ್ ಹೋಲ್‌ನ್ನು ಸರಿಪಡಿಸುವಂತೆ ಮತ್ತು ರಂಗನಾಥ ಕಾಲೋನಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು ನೀರಿನ ಸಮಸ್ಯೆಯನ್ನು ಸರಿಪಡಿಸುವಂತೆ ಹಾಗೂ ಮನೆಗಳಿಗೆ ಸರಿಯಾಗಿ ನೀರು ಬರುತ್ತಿಲ್ಲವೆಂದು ಇದರು ಬಗ್ಗೆ ಆದಷ್ಟು ಬೇಗ ಕ್ರಮವನ್ನು ಕೈಗೊಳ್ಳಲು ಸ್ಥಳಿಯ ಸಾರ್ವಜನಿಕರು ಮತ್ತು ಶ್ರೀ. ರಾಜು ರವರು ಕೋರಿದರು. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ. ಮಂಜುನಾಥ್ ಜಲ ಪರಿವೀಕ್ಷಕರವರು ಕ್ರಮವನ್ನು ಕೈಗೊಳ್ಳುವುದಾಗಿ ತಿಳಿಸಿದರು.

**ಕ್ರಮ : ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆ**

ಕಸ್ತೂರಿಬಾ ಕಾಲೋನಿಯಲ್ಲಿ ಕಸ ವಿಂಗಡಣೆ ಮಾಡುವ ಬಗ್ಗೆ ಪ್ರಚಾರ ಮಾಡಲು ಸ್ಥಳಿಯ ಸಾರ್ವಜನಿಕರು ತಿಳಿಸಿದರು, ಸಭೆಯಲ್ಲಿ ಹಾಜರಿದ್ದ ಶ್ರೀ. ಹೆಚ್. ಮಂಜುನಾಥ್ ಕಿರಿಯ ಆರೋಗ್ಯ ಪರಿವೀಕ್ಷಕರವರು ಕ್ರಮವನ್ನು ಕೈಗೊಳ್ಳುವುದಾಗಿ ತಿಳಿಸಿದರು.

**ಕ್ರಮ : ಘನತ್ಯಾಜ್ಯ ನಿರ್ವಹಣೆ ಕೊಶ**

ಎಸ್.ಸಿ/ಎಸ್.ಟಿ. ಕಾಮಗಾರಿಗಳು ನಡೆಯುವ ಸ್ಥಳವನ್ನು ತಿಳಿಸಲು ಹಾಗೂ ವಾರ್ಡ್ ಕಮಿಟಿಗೆ ನೋಡೆಲ್ ಅಧಿಕಾರಿಯವರು ಬರುವಂತೆ ಕೋರಿದರು. ಹಾಗೂ ಡಾ॥ ಬಿ.ಆರ್. ಅಂಬೇಡ್ಕರ್ ಭವನವು ಇರುವುದು ಸರಿಯಷ್ಟೆ ಆದರೇ ಯಾವ ಉದ್ದೇಶಕ್ಕಾಗಿ ಭವನ ಇದೆ ಎಂದು ಮತ್ತು ಇದು ಸಾರ್ವಜನಿಕರ ಸ್ವತ್ತಾಗಿರುವುದರಿಂದ ಬೀಗದ ಕೀಯನ್ನು ಹಾಕುವಂತೆ ಸಭೆಯಲ್ಲಿ ತಿಳಿಸಿದರು ಹಾಗೂ ಸಾರ್ವಜನಿಕರ ಶೌಚಾಲಯಗಳಲ್ಲಿ ರಾತ್ರಿ ಹೊತ್ತು ಮಲಗುತ್ತಿರುವುದರಿಂದ ಶೌಚಾಲಯದಲ್ಲಿ ಮಲಗದಂತೆ ಕೀಯನ್ನು ಹಾಕಲು, ಕಸ್ತೂರಿಬಾ ಕಾಲೋನಿಯಲ್ಲಿರುವ ಸ್ಮಶಾನಕ್ಕೆ ಕಾವಲುಗಾರರನ್ನು ನೇಮಿಸಿ ಮರಣ ಹೊಂದಿದವರ ಮಹಜರು ಮಾಡುವಂತೆ ಶ್ರೀ. ಎಂ.ವೆಂಕಟೇಶ್ ರವರು ತಿಳಿಸಿದರು.

**ಕ್ರಮ : ಕಾಮಗಾರಿ ಇಲಾಖೆ**

ಎಸ್.ಸಿ/ಎಸ್.ಟಿ. ಕಾಲೋನಿಗಳಲ್ಲಿ ಖಾತೆಗಳ ಬಗ್ಗೆ ತೊಂದರೆ ಇದ್ದು, ದೀಪಾಂಜಲಿನಗರದ ಕಾಲೋನಿಗೆ ಖುದ್ದು ಭೇಟಿ ನೀಡುವಂತೆ ಶ್ರೀ.ಎಂ.ವೆಂಕಟೇಶ್ ರವರು ತಿಳಿಸಿದರು ಮತ್ತು ಕಂದಾಯ ಪಾವತಿಸದಿರುವ ಮನೆಗಳಿಗೆ ನೋಟೀಸ್‌ನ್ನು ನೀಡುವಂತೆ, ಬಾಡಿಗೆ ಮನೆಯಲ್ಲಿ ಇರುವವರಿಗೆ ವೈಯುಕ್ತಿಕ ಮನೆಗಳನ್ನು ಕಲ್ಪಿಸಲು, ಪರಿಹಾರ ಮೊತ್ತವನ್ನು ಹೆಚ್ಚಿಸಲು ಹಾಗೂ ಕೊರೋನದಿಂದ ರಂಗನಾಥ ಕಾಲೋನಿಯಲ್ಲಿ ಮರಣ ಹೊಂದಿರುವ ಲೇಟ್ ತಿಮ್ಮಯ್ಯ ರವರಿಗೆ ಪರಿಹಾರವನ್ನು ನೀಡುವಂತೆ ಶ್ರೀ. ರಾಜು ರವರು ಕೋರಿದರು.

**ಕ್ರಮ : ಕಂದಾಯ ಇಲಾಖೆ**

ಸಭೆಯನ್ನು ಕಾರ್ಯದರ್ಶಿಗಳಾದ ಶ್ರೀಮತಿ. ಚೈತ್ರ .ಜಿ.ಎಸ್. ರವರು ವಂದನಾರ್ಪಣೆಯೊಂದಿಗೆ ಮುಕ್ತಾಯ ಮಾಡಿದರು.

ಕಾರ್ಯದರ್ಶಿ

ವಾರ್ಡ್ ಸಂಖ್ಯೆ : 158 (ಗಾಳಿ ಆಂಜನೇಯ ಸ್ವಾಮಿ)

<u>ಪ್ರತಿಯನ್ನು:-</u>

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
4. ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.